**ಸಿ.ಸಿ- 27/2016**
**ಪಿ. ಡಬ್ಲ್ಯೂ-40**

**ಇಂದು ದಿಃ04-03-2021 ರಂದು ಸಾಕ್ಷಿ ಹಾಜರು ಇದ್ದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು ಆರೋಪಿ ಪರಃ ಶ್ರೀ ಆರ್.ಪಿ. ವಕೀಲರಿಂದಃ**

ನಾನು ಶಾಲೆ ಕಲಿತಿಲ್ಲ. ನಮ್ಮ ಕಡೆ ಬೆದ್ದಲು ಭೂಮಿ ಇರುತ್ತದೆ ಎಂದರೆ ಸಾಕ್ಷಿ ತುಂಗಾ ಭದ್ರಾ ನದಿಯ ಮೇಲೆ ಪಂಪ್ ಸೆಟ್ ಇರುತ್ತದೆ ಎಂದು ಹೇಳುತ್ತಾರೆ. ತುಂಗಾ ಭದ್ರಾ ನದಿಯಿಂದ ಪಂಪ್ ಸೆಟ್ ಮೂಲಕ ಬೆಳೆದರೆ ಪಹಣಿಯಲ್ಲಿ ಆ ಕುರಿತು ನಮೂದಾಗುತ್ತದೆ ಎಂದರೆ ನಿಜ. ನಿಪಿ 24 ರಲ್ಲಿ ಭತ್ತ ಬೆಳೆದ ಬಗ್ಗೆ ಮತ್ತು ಪಂಪ್ ಸೆಟ್ ಇದ್ದ ಬಗ್ಗೆ ನಮೂದು ಇಲ್ಲ. ನಾನು ಎಂದಿಗೂ ಭತ್ತ ಬೆಳೆದಿಲ್ಲ ರೈತ ಸಂಘದವರು ಮತ್ತು ಬೆಳೆಕೆರಪ್ಪನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 25 ನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಭತ್ತ ಕೊಟ್ಟ ಕುರಿತು ದಾಖಲೆಗಳನ್ನು ಹಾಜರುಪಡಿಸಿಲ್ಲ. ಆರೋಪಿ ನನ್ನಿಂದ ಯಾವುದೇ ಭತ್ತ ಖರೀದಿ ಮಾಡಿಲ್ಲ ಹಾಗೂ ನನಗೆ ಯಾವುದೇ ಬಾಕಿ ಹಣ ಕೊಡುವುದು ಇಲ್ಲ ಎಂದರೆ ಸರಿಯಲ್ಲ. ಕುಬೇರ ಗೌಡ ಎಷ್ಟು ಚೀಲ ಭತ್ತ ಬೆಳೆದಿದ್ದ ಮತ್ತು ಎಷ್ಟು ಚೀಲ ಬೆಳೆದಿದ್ದ ಎನ್ನುವ ಬಗ್ಗೆ ಪೋಲೀಸರಿಗೆ ಹೇಳಿಲ್ಲ. ಕುಬೇರ ಗೌಡ ತಂದೆ ಮಲ್ಲಪ್ಪ ಶಿವಪೂಜೆ ------------ಭತ್ತವನ್ನು ಮಾರಾಟ ಮಾಡಿದ್ದು ಎಂದು ಓಧಿ ಹೇಳಲಾಳದ ಹೇಳಿಕೆಯ ಭಾಗವನ್ನು ಸಾಕ್ಷಿ ಸುಳ್ಳು ಎಂದು ಅಲ್ಲೆಗೆಳೆದ ಕಾರಣ ಸದರಿ ಭಾಗವನ್ನು ನಿಡಿ 13 ಎಂದು ಗುರುತಿಸಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ,**
**ಜೆ.ಎಂ.ಎಫ್.ಸಿ, ಹರಿಹರ.**